2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಸಿ ಸಿ ನಂ.1039/2023

ಪಿರ್ಯಾದಿದಾರರು: ವಿರುದ್ಧ ಆರೋಪಿತರು

ಸರ್ಕಾರದ ಪರವಾಗಿ ಕರಿಬಸಯ್ಯ ಹಾಗೂ ಇತರರು

ಮಲೆಬೆನ್ನೂರು ಪೋಲೀಸ್ ಠಾಣೆ

## ದೋಷಾರೋಪಣೆ

ಶ್ರೀಮತಿ ವೀಣಾ ಕೋಳೆಕರ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮ ಮೇಲೆ ಅಂದರೆ:

ಆ.1 ಕರಿಬಸಯ್ಯ ತಂದೆ ಲೇಟ್ ಉಜ್ಜನಯ್ಯ, 48 ವರ್ಷ,

ಆ.2 ಶ್ರೀಮತಿ ಸವಿತಾ ಗಂಡ ಕರಿಬಸಯ್ಯ, 36 ವರ್ಷ,

ಆ.3 ವೀರಯ್ಯ ತಂದೆ ಕಲ್ಯಾಣಯ್ಯ, 67 ವರ್ಷ,

ಎಲ್ಲರ ವಾಸ: ಕೋಮಾರನಹಳ್ಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಹೊರಿಸುವ ಆರೋಪಣೆ ಏನೆಂದರೆ:

1 ನೇ ಆರೋಪಿ ಮತ್ತು ಚಾಸಾ.4 ರವರು ಸಹೋದರರಾಗಿದ್ದು, ಅವರ ಮಧ್ಯೆ ಜಮೀನಿನ ವಿಚಾರವಾಗಿ ಮನಸ್ತಾಪವಿದ್ದು, ದಿನಾಂಕ: 26.11.2022 ರಂದು ಬೆಳಿಗ್ಗೆ 07.30 ಗಂಟೆ ಸಮಯದಲ್ಲಿ ಚಾಸಾ.4 ಮತ್ತು 1 ರವರು ಮಲೇಬೆನ್ನೂರು ಪೊಲೀಸ್ ಠಾಣಾ ಸರಹದ್ದಿನ ಕೋಮಾರನಹಳ್ಳಿ ಗ್ರಾಮದ 1 ನೇ ಆರೋಪಿಯ ಮನೆಯ ಮುಂದೆ ಬಂದು ನಮ್ಮ ಬಾಬ್ತು ಹೊಲದ ದಾರಿ ಸರಿ ಮಾಡಿಸಿಕೊಡು ಎಂದು ಕೇಳಿದಾಗ ಆರೋಪಿತರೆಲ್ಲರೂ ಸಮಾನ ಉದ್ದೇಶ ಹೊಂದಿ ಚಾಸಾ.1 ಮತ್ತು 4 ರವರಿಗೆ ''ಸೂಳ ಮುಂಡೆ'' ಎಂದು ಅವಾಚ್ಯ ಶಬ್ಧಗಳಿಂದ ಸಾರ್ವಜನಿಕವಾಗಿ ಬೈದಾಡಿ ಅವರಿಗೆ ಅವಮಾನವಾಗುವಂತೆ ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ 34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರೆಲ್ಲರೂ ಜಗಳ ಮಾಡುವ ಸಮಾನ ಉದ್ದೇಶ ಹೊಂದಿ ನಿಮ್ಮಲ್ಲಿಯ 3 ನೇ ಆರೋಪಿ ಕುಮ್ಮಕ್ಕಿನಿಂದ ಉಳಿದ ಆರೋಪಿತರು ಚಾಸಾ.1, 4 ರವರೊಂದಿಗೆ ಜಗಳವಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.114 ಸಹ ಕಲಂ .34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು

ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರೆಲ್ಲರೂ ಸಮಾನ ಉದ್ದೇಶ ಹೊಂದಿ ಚಾಸಾ.1 ಮತ್ತು 4 ರವರಿಗೆ ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪ ನೋವುಂಟು ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರೆಲ್ಲರೂ ಸಮಾನ ಉದ್ದೇಶ ಹೊಂದಿ ಚಾಸಾ.1 ಮತ್ತು 4 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ದ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಈ ದಾಖಲೆಯು ಆತನು ನೀಡಿದ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ಅಂಶಗಳನ್ನು ಒಳಗೊಂಡಿದೆ )

Sd/-

ದಿನಾಂಕಃ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ,ಹರಿಹರ.